### ಸುರತ್ಕಲ್ ಎನ್ಐಟಿಕೆ ಘಟಿಕೋತ್ಸವದಲ್ಲಿ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್

# ಭಾರತ ಉದ್ಯೋಗದಾತವಾಗಲಿ

**ವಿಕ ಸುದ್ದಿಲೋಕ** ಮಂಗಳೂರು

''ಭಾರತದಲ್ಲಿ ಮಾಹಿತಿ ತಂತ್ರಜ್ಞಾನ ಮೂಲಕ ಕೈಗಾರಿಕಾ ಕ್ರಾಂತಿ ನಡೆಯಬೇಕು. ಈ ನಿಟ್ಟಿನಲ್ಲಿ ಪದವಿ ಪಡೆದ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಸಹಯೋಗ ಅಗತ್ಯ. ದೇಶವು ಉದ್ಯೋಗದಾತವಾಗಬೇಕೇ ವಿನಃ ಉದ್ಯೋಗ ಹುಡುಕುವ ರಾಷ್ಟ್ರವಾಗಬಾರದು'', ಎಂದು ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದರು.

ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ(ಎನ್ಐಟಿಕೆ)ದ ಇಪ್ಪತ್ತನೇ ವಾರ್ಷಿಕ ಘಟಿಕೋತ್ಸವದಲ್ಲಿ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ನೆರವೇರಿಸಿ ಮಾತನಾಡಿದರು.

''2047ರಲ್ಲಿ ಭಾರತ ಸ್ವಾತಂತ್ರ್ಯದ ಶತಮಾನೋತ್ಸವ ಸಂದರ್ಭದಲ್ಲಿ ಸಂಶೋಧನೆ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡುವಂತಾಗಲು ಜೈ ಅನುಸಂಧಾನ್ ಘೋಷಣೆಯನ್ನು ಪ್ರಧಾನಿ ನರೇಂದ್ರ ಮೋದಿ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಕಾಲೇಜು ಮಟ್ಟದಲ್ಲಿ ಎಲ್ಲ ಸೌಲಭ್ಯಗಳನ್ನು ಪಡೆದು ವಿದ್ಯಾರ್ಥಿಗಳನ್ನು ಜಾಗತಿಕ ಮಟ್ಟದ ಸ್ಪರ್ಧೆ ಎದುರಿಸಲು ಸಜ್ಜುಗೊಳಿಸಬೇಕಾಗಿದೆ. ಇದಕ್ಕೆ ಪೂರಕ ವಾತಾವರಣವನ್ನು ಸರಕಾರ ಮಾಡುತ್ತಿದೆ'', ಎಂದರು.

ಎನ್ಐಟಿಕೆಯ 1973ನೇ ಸಾಲಿನ ಹಳೆ ವಿದ್ಯಾರ್ಥಿ, ಬೆಂಗಳೂರಿನ ಸೋನಾ ಗ್ರೂಪ್ ಆಫ್ ಇಂಡಸ್ಟ್ರೀಸ್‌ನ ವ್ಯವಸ್ಥಾಪಕ ನಿರ್ದೇಶಕ ಯಜ್ಞನಾರಾಯಣ ಮತ್ತು 1981ನೇ ಸಾಲಿನ ಹಳೆ ವಿದ್ಯಾರ್ಥಿ ಇಟಲಿಯ ಮೈರೆ ಟೆಕ್ನಿಮೊಂಟ್ ಕಂಪನಿಯ ಭಾರತೀಯ ವಲಯದ ಉಪಾಧ್ಯಕ್ಷ ಮಿಲಿಂದ್ ವಿ. ಬರಿಡೇ ಅತಿಥಿಗಳಾಗಿದ್ದರು.

ಸಂಸದ ನಳಿನ್ ಕುಮಾರ್ ಕಟೀಲ್, ಶಾಸಕರಾದ ಡಾ. ಭರತ್ ಶೆಟ್ಟಿ, ವೈ.ಎ. ನಾರಾಯಣಸ್ವಾಮಿ, ಎನ್ಐಟಿಕೆ ಕುಲಸಚಿವ ಪ್ರೊ. ಕೆ. ರವೀಂದ್ರನಾಥ್, ಕೇಂದ್ರೀಯ ಸಂಶೋಧನಾ ಸೌಲಭ್ಯದ ಅಧ್ಯಕ್ಷ ಪ್ರೊ. ಎಂ.ಎನ್. ಸತ್ಯನಾರಾಯಣ, ಆಡಳಿತ ಮಂಡಳಿ, ಸೆನೆಟ್ ಸದಸ್ಯರು ಉಪಸ್ಥಿತರಿದ್ದರು. ಎನ್ಐಟಿಕೆ ನಿರ್ದೇಶಕ ಪ್ರೊ.ಪ್ರಸಾದ್‌ಕೃಷ್ಣ ಸ್ವಾಗತಿಸಿದರು.



ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ(ಎನ್ಐಟಿಕೆ)ದ ಇಪ್ಪತ್ತನೇ ವಾರ್ಷಿಕ ಘಟಿಕೋತ್ಸವದಲ್ಲಿ ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವ ಧರ್ಮೇಂದ್ರ ಪ್ರಧಾನ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನಿಸಿದರು.

## 1,787 ಮಂದಿಗೆ ಪದವಿ

ಎನ್ಐಟಿಕೆ ಘಟಿಕೋತ್ಸವದಲ್ಲಿ ಒಟ್ಟು 1,787 ಅಭ್ಯರ್ಥಿಗಳು ಪದವಿ ಸ್ವೀಕರಿಸಿದರು. ಇದರಲ್ಲಿ 126 ಪಿಎಚ್‌ಡಿ, 817 ಸ್ನಾತಕೋತ್ತರ, 844 ಬಿ.ಟೆಕ್ ಪದವಿ ಪಡೆದರು. 249 ಬಿ.ಟೆಕ್ ವಿದ್ಯಾರ್ಥಿಗಳಿಗೆ ತಮ್ಮ ಬಿ.ಟೆಕ್ ಪದವಿಯೊಂದಿಗೆ ಇತರ ವಿಭಾಗಗಳಲ್ಲಿ ಕಿರು ಪದವಿ ನೀಡಲಾಯಿತು. ಮೊದಲ ಬಾರಿಗೆ ಎನ್ಐಟಿಕೆ ಬಿ.ಟೆಕ್ (ಆನರ್ಸ್) ಪದವಿ ನೀಡಲಾಯಿತು. 9 ಬಿ.ಟೆಕ್ ವಿದ್ಯಾರ್ಥಿಗಳು ಮತ್ತು 30 ಪಿಜಿ ವಿದ್ಯಾರ್ಥಿಗಳು ಅತ್ಯಧಿಕ ಸಿಜಿಪಿಎ ಗಳಿಸಿದ ಹಿನ್ನೆಲೆಯಲ್ಲಿ ಸಂಸ್ಥೆಯ ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು.

## ಚಿನ್ನದ ಪದಕ ಪಡೆದವರು

ಅಭಿಜಿತ್ ಸಿ., ವಿಕ್ರಾಂತ್ ಕಾಳ-2, ದೇವೇಂದ್ರ ಶರ್ಮಾ, ದೇಯಶಿನಿ ಭಟ್ಟಾಚಾರ್ಯ, ಜಾಧವ್ ಸ್ನೇಹಲ್ ರಮಾನಾಥ ಮಾಧುರಿ, ಅಭಿಜಿತ್ ಸಿಂಗ್-2, ಸುದೀಪ್ತಿ ನಲ್ಲ, ಸುದೀಪ್ತಿ ನಲ್ಲ-3, ಆದಿತ್ಯ-2, ಅನಂತ ರಘೋತ್ತಮ ಅರ್ನಿ-3, ಕಾರ್ತಿಕ್ ಮೆನನ್. ಕೃತಿ ಶುಕ್ಲ-2, ಆದಿತ್ಯ ಸಿ., ರಂಗರಾಜನ್ ರೋಶನ್, ಕಾಜಲ್ ಚೌರಾಸಿಯಾ-2, ವರುಣ್ ಆರ್.ಪಿ.

## ಕೇಂದ್ರೀಯ ಸಂಶೋಧನಾ ಸೌಲಭ್ಯ ಉದ್ಘಾಟನೆ

ಘಟಿಕೋತ್ಸವ ಪೂರ್ವದಲ್ಲಿ 48 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಕೇಂದ್ರೀಯ ಸಂಶೋಧನಾ ಸೌಲಭ್ಯ (ಸಿಆರ್‌ಎಫ್) ಮತ್ತು ಸ್ಕೂಲ್ ಆಫ್ ಇಂಟರ್ ಡಿಸಿಪ್ಲಿನರಿ ಸ್ಟಡೀಸ್ ಕಟ್ಟಡವನ್ನು ಸಚಿವ ಧರ್ಮೇಂದ್ರ ಪ್ರಧಾನ್ ಉದ್ಘಾಟಿಸಿದರು. 54.76 ಕೋಟಿ ರೂ. ವೆಚ್ಚದ ಲೆಕ್ಚರ್ ಹಾಲ್ ಕಾಂಪ್ಲೆಕ್ಸ್ ಬ್ಲಾಕ್ ಡಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

Vijaya Karnataka, Date: 16/10/22. p, no - 2